





ನಿಗಾಟಾ ನಗರದ ಪ್ರವಾಸೋದ್ಯಮ ವಿಭಾಗವು ಮುಸಾಶಿನೋ ಆರ್ಟ್ ಯೂನಿವರ್ಸಿಟಿಯ ಸಹಯೋಗದಲ್ಲಿ ಭತ್ತದ ಕೊಯ್ಲು ಋತು ಮುಗಿಸಿದ ಸಲುವಾಗಿ ಹಬ್ಬದಂತೆ ಈ ಸೃಜನಶೀಲ ಕಲಾಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಕೃಷಿ ಮುಗಿದ ಬಳಿಕ ಗದ್ದೆಯ ಒಣಹುಲ್ಲು ರಾಸುಗಳಿಗೆ ಮೇವು ಆಗಿ ಮತ್ತು ಮಣ್ಣಿನ ಫಲವತ್ತತೆ ಹೆಚ್ಚಿಸಲು ನೆರವಾಗುತ್ತದೆ. ಜತೆಗೆ ಈ ಒಣಹುಲ್ಲಿನ ಕಲಾಕೃತಿಗಳ ಮೂಲಕ ಇದೀಗ ಕಲಾ ಉತ್ಸವಕ್ಕೂ ಕೊಡುಗೆ ನೀಡುತ್ತಿದೆ. ಇಡೀ ಅಕ್ಟೋಬರ್ ತಿಂಗಳು ಈ ಕಲಾಪ್ರದರ್ಶನ ವೀಕ್ಷಕರಿಗೆ ತೆರೆದಿರುತ್ತದೆ. ಕಳೆದ ವರ್ಷ ಈ ಗದ್ದೆಗಳಲ್ಲಿ ಬೃಹತ್ ಏಡಿಗಳ ಕಲಾಕೃತಿಗಳನ್ನು ರಚಿಸಿ ಹವಾಮಾಲಿನ್ಯದ ಬಗ್ಗೆಯೂ ಜನರಲ್ಲಿ ಎಚ್ಚರ ಮೂಡಿಸಲಾಗಿತ್ತು.